# ಕರ್ನಾಟಕ ಪಬ್ಲಿಕ್ ಸ್ಕೂಲ್ (ಪ್ರೌಢ ವಿಭಾಗ) ಧನ್ನೂರ ತಾ.ಹುನಗುಂದ ಜಿ.ಬಾಗಲಕೋಟ

## ಸೇತುಬಂಧ ಪರೀಕ್ಷೆ (ಪೂರ್ವ ಪರೀಕ್ಷೆ) – 2025-26

ವರ್ಗ: 10 ವಿಷಯ: ಕನ್ನಡ ದಿನಾಂಕ: -06-2025

| ವಿದ್ಯಾರ್ಥಿ/ನಿ ಹೆಸರು : | | | ಹಾಜರಿ ಸಂಖ್ಯೆ : |
|---|---|---|---|
| ಒಟ್ಟು ಎ ಶ್ರೇಣಿ : | ಒಟ್ಟು ಬಿ ಶ್ರೇಣಿ : | ಮೌಲ್ಯಮಾಪಕರ ಸಹಿ : | |

*** ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.**

1) ಕನ್ನಡ ವರ್ಣಮಾಲೆಯಲ್ಲಿರುವ ವ್ಯಂಜನಾಕ್ಷರಗಳ ಸಂಖ್ಯೆ ಎ) 49 ಬಿ) 13 ಸಿ) 34 ಡಿ) 25 **ಉತ್ತರ :** ____________

2) 'ಅಂಕಿತನಾಮ' ಪದಕ್ಕೆ ಉದಾಹರಣೆ ಎ) ಕುರುಡ ಬಿ) ಬೆಟ್ಟ ಸಿ) ತಾವು ಡಿ) ಮಹೇಶ **ಉತ್ತರ :** ____________

3) ಗುರೂಪದೇಶ ಇದು ಯಾವ ಸಂಧಿ ಎ)ಲೋಪಸಂಧಿ ಬಿ)ಆದೇಶಸಂಧಿ ಸಿ)ಗುಣಸಂಧಿ ಡಿ)ಸವರ್ಣದೀರ್ಘಸಂಧಿ **ಉತ್ತರ :** ____________

4) ಅವನು-ಅವಳು ಇವು ಈ ಪುರುಷವಾಚಕ ಸರ್ವನಾಮಗಳು **ಉತ್ತರ :** ____________
ಎ) ಉತ್ತಮಪುರುಷ ಬಿ) ಮಧ್ಯಮಪುರುಷ ಸಿ) ಪ್ರಥಮಪುರುಷ ಡಿ) ಯಾವುದೂ ಅಲ್ಲ.

5) ಕಲ್ಪನೆಯು ಧ್ಯೇಯಗಳ ಜಗತ್ತಿನಲ್ಲಿ ಹೊಳೆಯುವುದು – ಈ ವಾಕ್ಯ ಯಾವ ಕಾಲದಲ್ಲಿದೆ? **ಉತ್ತರ :** ____________
ಎ) ಭೂತಕಾಲ ಬಿ) ವರ್ತಮಾನಕಾಲ ಸಿ) ಭವಿಷ್ಯತ್ ಕಾಲ ಡಿ) ಯಾವುದೂ ಅಲ್ಲ

6) 'ನೋಡು' ಧಾತುವಿನ ಸಂಭವನಾರ್ಥಕ ರೂಪ ಎ)ನೋಡಲಿ ಬಿ)ನೋಡಿಯಾನು ಸಿ)ನೋಡುವನು ಡಿ)ನೋಡನು **ಉತ್ತರ :** ____________

7) ಗುರು – ಲಘು ಮೊದಲಲ್ಲಿ ಬರಲು ಎ) ಮ–ನ ಗಣ ಬಿ) ಭ–ಯ ಗಣ ಸಿ) ಜ–ರ ಗಣ ಡಿ) ಸ–ತ ಗಣ **ಉತ್ತರ :** ____________

8) ದ್ವಿತೀಯಾ ವಿಭಕ್ತಿ ಪ್ರತ್ಯಯ ಎ) ಅನ್ನು ಬಿ) ಅಲ್ಲಿ ಸಿ) ಇಂದ ಡಿ) ಅ **ಉತ್ತರ :** ____________

9) 'ಹಾಡಿದಳು' – ಈ ಕ್ರಿಯಾಪದದಲ್ಲಿ ಇರುವ ಧಾತು ಇದು:-ಎ) ಹಾಡು ಬಿ) ಹಾಡಿದ ಸಿ) ಹಾಡಿ ಡಿ) ಅಳು **ಉತ್ತರ :** ____________

10) ಹೆಬ್ಬಾಗಿಲು – ಈ ಪದ ಯಾವ ಸಮಾಸಕ್ಕೆ ಉದಾಹರಣೆ **ಉತ್ತರ :** ____________
ಎ) ತತ್ಪುರುಷ ಸಮಾಸ ಬಿ) ಕರ್ಮಧಾರೆಯ ಸಮಾಸ ಸಿ) ಬಹುವ್ರೀಹಿ ಸಮಾಸ ಡಿ) ಕ್ರಿಯಾ ಸಮಾಸ

**11. ಕೊಟ್ಟಿರುವ ಗದ್ಯಭಾಗವನ್ನು ಓದಿಕೊಂಡು, ಮುಂದಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಯಕ್ಷಗಾನವು ನೃತ್ಯ ಪ್ರಧಾನ ಕಲೆಯಾಗಿದೆ. ಪ್ರಾರಂಭದಲ್ಲಿ ದೇಸೀ ಕಲೆಯಾಗಿದ್ದು, ಅನಂತರ ಶಾಸ್ತ್ರದ ಚೌಕಟ್ಟಿಗೆ ಒಳಪಟ್ಟಿದೆ. ಇದು ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿಸುವ ಅಪೂರ್ವ ಶಕ್ತಿಯುಳ್ಳ ಕಲೆ. ಯಕ್ಷಗಾನದಲ್ಲಿ ಪ್ರಾದೇಶಿಕ ಪ್ರಭೇದಗಳಿವೆ. ಅದರಲ್ಲಿ ಮುಖ್ಯವಾದ ಮೂರು ಶೈಲಿಗಳು ತೆಂಕುತಿಟ್ಟು, ಬಡಗುತಿಟ್ಟು ಹಾಗೂ ಬಡಬಡಗುತಿಟ್ಟು. ಯಕ್ಷಗಾನಕ್ಕೆ ದಶಾವತಾರ, ಬಯಲಾಟ, ಭಾಗವತರಾಟ ಎಂಬ ಹೆಸರುಗಳಿವೆ. ಸಾಮಾನ್ಯವಾಗಿ ಹಳ್ಳಿಯ ಬಯಲಿನಲ್ಲಿ ಬಯಲಾಟ ಪ್ರದರ್ಶಿತವಾಗುವುದು. ಆದ್ದರಿಂದ ಅದು ಬಯಲಾಟ. ಯಕ್ಷಗಾನ ಕಲಿಸುವವನೇ ಭಾಗವತನಾದ್ದರಿಂದ ಭಾಗವತರಾಟ ಎಂಬ ಹೆಸರೂ ಬಂದಿದೆ. ಗೀತ, ಕುಣಿತ, ವೇಷಭೂಷಣ, ಮಾತುಗಾರಿಕೆ, ವಾದ್ಯ – ಇವು ಬಯಲಾಟದ ಪಂಚ ಅಂಗಗಳು. ಯಕ್ಷಗಾನದಲ್ಲಿ ಹಾಡುಗಾರಿಕೆ ಹಾಗೂ ಕುಣಿತ ಪ್ರಮುಖ ಅಂಗಗಳಾಗಿವೆ. ಕುಣಿತಕ್ಕೆ ತಕ್ಕಂತೆ ಅಭಿನಯ, ಜಿಗಿತ, ಸಂಭಾಷಣೆ, ಹುಬ್ಬುಗಳ ಚಲನೆಗಳು ಪ್ರೇಕ್ಷಕರನ್ನು ತನ್ಮಯಗೊಳಿಸುತ್ತವೆ. ಯಕ್ಷಗಾನದಲ್ಲಿ ರಾಮಾಯಣ, ಮಹಾಭಾರತ ಮತ್ತು ಭಾಗವತದ ಪ್ರಸಂಗಗಳನ್ನು ಪ್ರದರ್ಶಿಸಲಾಗುತ್ತದೆ. ಯಕ್ಷಗಾನದಲ್ಲಿ ನವರಸಗಳ ಅಭಿವ್ಯಕ್ತಿಗೆ ಅವಕಾಶವಿರುತ್ತದೆ. ಇದು ಪ್ರೇಕ್ಷಕರನ್ನು ರಂಜಿಸುತ್ತದೆ.

**ಪ್ರಶ್ನೆಗಳು:**

* ಯಕ್ಷಗಾನದಲ್ಲಿ ಇರುವ ಪ್ರಾದೇಶಿಕ ಪ್ರಭೇದಗಳು ಯಾವುವು? **ಉತ್ತರ :** ____________________________________________

* ಯಕ್ಷಗಾನಕ್ಕೆ ಇರುವ ಇತರ ಹೆಸರುಗಳು ಯಾವುವು? **ಉತ್ತರ :** ____________________________________________

**12. ಕೊಟ್ಟಿರುವ ಪದ್ಯಭಾಗಕ್ಕೆ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.**

ಬೀಸುವ ಗೂಟವಾದೆ
ಕೇರುವ ಮರವಾದೆ
ಮುದುಕರಿಗೆ ಊರುವ ಬೆತ್ತವಾದೆ

**ಉತ್ತರ:**______________________________________________________________________________
______________________________________________________________________________
______________________________________________________________________________
______________________________________________________________________________
______________________________________________________________________________

**13. ಕೊಟ್ಟಿರುವ ವ್ಯಂಜನಾಕ್ಷರಗಳಿಗೆ ಸ್ವರ ಸೇರಿಸಿ ಪದ ರಚಿಸಿ ಬರೆಯಿರಿ.**

* ಪ್+ಉ+ಟ್+ಟ್+ಅ+ಹ್+ಅ+ಕ್+ಕ್+ಇ = __________ * ಪ್+ಅ+ಂ+ಥ್+ಆ+ಹ್+ವ್+ಆ+ನ್+ಅ = __________

**14. ಕೊಟ್ಟಿರುವ ಸಂಯುಕ್ತಾಕ್ಷರಗಳಲ್ಲಿ ಸಜಾತಿ ಸಂಯುಕ್ತಾಕ್ಷರ ಮತ್ತು ವಿಜಾತಿ ಸಂಯುಕ್ತಾಕ್ಷಗಳಾವುವು ಹೆಸರಿಸಿರಿ.**

* ಬೃಹಸ್ಪತಿ – ______________ * ಪುಟ್ಟಹಕ್ಕಿ : ______________

* ವೈಜ್ಞಾನಿಕ – ______________ * ನಡುಗನ್ನಡ – ______________

**15. ಕೊಟ್ಟಿರುವ ನಾಣ್ಣುಡಿ, ಪದಪುಂಜ, ನುಡಿಗಟ್ಟು, ಸೌಮ್ಯೋಕ್ತಿ ಪದಗಳನ್ನು ಪುನಃ ತಪ್ಪಿಲ್ಲದೇ ಬರೆಯಿರಿ.**

* ಅಡ್ಡದಾರಿ ಹಿಡಿ **ಉತ್ತರ:**______________________ * ತಲೆದೂಗು **ಉತ್ತರ:**______________________

* ಪಿತ್ತ ನೆತ್ತಿಗೇರು **ಉತ್ತರ:**______________________ * ಹಿತ್ತಲ ಗಿಡ ಮದ್ದಲ್ಲ **ಉತ್ತರ:**______________________

**16. ಕೊಟ್ಟಿರುವ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ.**

* ಅಂಧಕಾರ :______________________________
* ಭೇದವಿಲ್ಲ :______________________________

**17. ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ.**

ಗುರುವಿಂದು ಬೆಸಸೆ ಭಿಕ್ಷೆಗೆ

ಬರುತಿರೆ ಪಿಡಿತಂದರೆಮ್ಮನಾ ದೆಸೆಗೆ ಭಯಂ

ಛಂದಸ್ಸಿನ ಹೆಸರು : ______________________

**18. ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಸಮನ್ವಯಗೊಳಿಸಿರಿ.**

**ಸೀತೆಯ ಮುಖ ಕಮಲದಂತೆ ಅರಳಿತು.**

*ಉಪಮೇಯ ________ *ಉಪಮಾನ : ________ * ಉಪಮಾವಾಚಕ: ________ *ಸಮಾನ ಧರ್ಮ: ________

* ಅಲಂಕಾರ : ______________

*ಸಮನ್ವಯ:______________________________

* ಲಕ್ಷಣ:______________________________

**19. ಈ ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ.** .

* ಅರ್ಥವಿಲ್ಲದ ಓದು ವ್ಯರ್ಥ * ಅತಿಯಾಸೆ ಗತಿಗೇಡು * ಕಾಯಕವೇ ಕೈಲಾಸ

**ಉತ್ತರ:**______________________________

**20.** ನೀವು ಧಾರವಾಡ ಸರಕಾರಿ ಪ್ರೌಢ ಶಾಲೆಯಲ್ಲಿ ಹತ್ತನೇ ತರಗತಿಯಲ್ಲಿ ಓದುತ್ತಿರುವ ಅಜಯ್/ಅರ್ಪಿತಾ ಎಂದು ಭಾವಿಸಿ ನಿಮ್ಮ ಅನಾರೋಗ್ಯ ಕಾರಣ ಮೂರು ದಿನಗಳ ರಜೆಕೋರಿ ಮುಖ್ಯೋಪಾಧ್ಯಾಯರಿಗೊಂದು ರಜೆಪತ್ರ ಬರೆಯಿರಿ. **ಅಥವಾ**

**ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆ ಇಲ್ಲದಂತೆ ಪ್ರಬಂಧ ಬರೆಯಿರಿ.**

* ದೂರದರ್ಶನ * ರಾಷ್ಟ್ರೀಯ ಹಬ್ಬಗಳು * ಕ್ರೀಡೆಗಳು

**ಉತ್ತರ:**______________________________